"ಇನ್ನೂ ಎಷ್ಟು ಹೊತ್ತು ನಿಮ್ಮ ಸಾಹೇಬರು ಬರುವುದು?..'' ಅಸಹನೆಯಿಂದಲೇ ಕೇಳಿದ ಡಿಮೆಲೋ.

ಅವನಿಗೆ ಉತ್ತರ ಕೊಡಲೆಂದೇ ಬಂದನೇನೋ ಎಂಬಂತೆ ರುದ್ರೇಶ್ ಒಳಗೆ ಬಂದ. ಅವನ ಜೊತೆಯಲ್ಲಿ ಬಿಜು ಕೂಡಾ ಒಳಗಡೆ ಬಂದ.

"ನಮ್ಮನ್ನೇಕೆ ಇಲ್ಲಿಗೆ ಕರೆಸಿದ್ದು?" ಇಬ್ಬರೂ ಒಟ್ಟಿಗೇ ಕೇಳಿದರು.

"ಲೂಸಿಯ ಸಾವಿನ ತನಿಖೆ ನಡೆಯುತ್ತಿದೆ. ಸಂಶಯ ಬಂದಾಗಲೆಲ್ಲಾ ಅದರ ಉತ್ತರ ಯಾರ ಬಳಿ ಇರುತ್ತದೆಯೋ ಅವರನ್ನೆಲ್ಲಾ ಕರೆಸಬೇಕಾಗುತ್ತದೆ... ಏನಂತಿರಾ ಬಿಜು?"

"ಸರ್, ಡಿಮೆಲೋ ಎಲ್ಲಾ ಹೊತ್ತಿನಲ್ಲಿಯೂ ನನ್ನ ಜೊತೆಗೇ ಇದ್ದ... ಅಂದರೆ ಲೂಸಿಯ ಕೊಲೆ ಜೀವನ್?..."

ಜೀವನ್ ಬೆಚ್ಚಿದ. ಭಯದಿಂದ ನಡುಗುತ್ತಾ, "ಸಾರ್, ನಾನೇನೂ ಮಾಡಿಲ್ಲ... ನಾನು ಲೂಸಿಯನ್ನು ನೋಡಿಯೇ ವಾರದ ಮೇಲೆ ಆಗಿತ್ತು. ಆಮೇಲೆ ನೋಡಿದ್ದು ಅವಳ ಶವವನ್ನು ಮಾತ್ರ..." ತೊದಲಿದ.

ತಾನು ಕುಳಿತಿದ್ದ ಕುರ್ಚಿಯಿಂದ ಧಡಕ್ಕನೆ ಎದ್ದ ಬಿಜು, ಮಿಂಚಿನಂತೆ ಜೀವನ್ ಮೇಲೆ ಎಗರಿ, "ಬಾಸ್ಟರ್ಡ್... ನೀನಾ ಅದು? ಲೂಸಿ ಹೇಳ್ತಾ ಇದ್ದಳು ನೀನು ಅವಳತ್ತ ಕೆಟ್ಟ ದೃಷ್ಟಿಯಿಂದ ನೋಡುತ್ತಿಯಾ ಅಂತ. ನಾನೇ ನಂಬಿರಲಿಲ್ಲ..."

"ಕೂಲ್ ಡೌನ್ ಬಿಜು, ಇನ್ನು ಕೆಲಹೊತ್ತಿನಲ್ಲಿಯೇ ಎಲ್ಲಾ ಗೊತ್ತಾಗುತ್ತದೆ..." ಸಮಾಧಾನಪಡಿಸುತ್ತಾ ಅವನನ್ನು ಕುಳ್ಳಿರಿಸಿದ ರುದ್ರೇಶ್. ಕುರ್ಚಿಯಲ್ಲಿ ಕುಳಿತರೂ ಸಿಟ್ಟಿನಿಂದ ಏದುಸಿರು ಬಿಡುತ್ತಿದ್ದ ಬಿಜು.

"ಸರ್ ನನಗೇನೂ ತಿಳಿಯುತ್ತಿಲ್ಲ..." ಭಯದಿಂದ ಜೀವನ್ ತೊದಲಿದ.

"ಮಿ. ಜೀವನ್, ಲೂಸಿ ಸಾಯುವ ಮೊದಲು ನಿಮಗೂ ಮತ್ತು ಅವರಿಗೂ ಜಗಳ ಆಗಿದ್ದು ನಿಜವಾ?"

"ಹೌದು ಸರ್... ನನ್ನ ಮಕ್ಕಳು ಅವರ ಮನೆಯಮುಂದೆ ಹೊಲಸು ಮಾಡಿದರು ಅನ್ನುವ ವಿಷಯಕ್ಕೆ ಕೊಂಚ ಮಾತುಕತೆ ಆಗಿತ್ತು. ಮಕ್ಕಳಿಲ್ಲದ ಅವಳಿಗೆ ಮಕ್ಕಳ ಬಗ್ಗೆ ಗೊತ್ತಿಲ್ಲ ಅಂತ ನಾನು ಕೊಂಕು ನುಡಿದೆ. ಅದೇ ಮಾತಿಗೆ ಜಗಳ ತಾರಕಕ್ಕೇರಿತ್ತು. ನಂತರ ಪರಸ್ಪರ ಕ್ಷಮೆ ಕೇಳಿದ್ದೆವು."

ಸಿಟ್ಟಿನಿಂದ ಬಿಜು ಎದ್ದು ನಿಂತ.

"ಕುಳಿತುಕೊಳ್ಳಿರ್ರೀ, ನಿಮಗೂ ಕೆಲ ಪ್ರಶ್ನೆಗಳು ಕೇಳುವುದಿದೆ. ಆಗ ಈ ಉದ್ವೇಗ ತೋರುವಿರಂತೆ."

ಎಸಿಪಿ ರುದ್ರೇಶ್‌ನ ಮಾತುಗಳು, ಅವನ ಧ್ವನಿ ಮೂವರನ್ನೂ ತಬ್ಬಿಬ್ಬು ಮಾಡಿದವು.

"ಜೀವನ್ ಸರಿಯಾಗಿ ಯೋಚಿಸಿ ಹೇಳಿ... ಬಿಜು, ಗೋವಾಕ್ಕೆ ಹೊರಡುವಾಗ, ನೀವು ಅವರಿಗೆ ವಿಶ್ ಮಾಡಿದ್ರಿ... ಅವರು, ಕಾರ್ ಹತ್ತುವ ಮೊದಲು, ಲೂಸಿಗೆ ಬೈ ಹೇಳಿದರು. ಆಗ ನೀವು ನೋಡಿದಿರಾ?"

ಜೀವನ್ ಹೌದೆಂದು ತಲೆ ಆಡಿಸಿದ.

"ಸರಿಯಾಗಿ ಯೋಚಿಸಿ ಹೇಳಿ... ಬಿಜು ಮತ್ತು ಲೂಸಿ ಇಬ್ಬರನ್ನೂ ನೋಡಿದಿರಾ?"

"ಇಲ್ಲ ಸರ್, ಲೂಸಿಯನ್ನು ನೋಡಲಿಲ್ಲ. ಬಿಜು ಮೇಲೆ ನೋಡುತ್ತಾ ಬೈ ಎಂದ. ಅಲ್ಲಿ ಲೂಸಿ ಇರಬೇಕು ಅಂತ ಅಂದ್ಕೊಂಡೆ."

ಡಿಮೆಲೋ ಕಡೆ ರುದ್ರೇಶ್ ತಿರುಗಿ, "ನೀವು ಲೂಸಿಯನ್ನು ಬೈ ಹೇಳುವಾಗ ನೋಡಿದಿರಾ?"

"ಇಲ್ಲ, ನಾನು ಡ್ರೈವಿಂಗ್‌ಸೀಟ್‌ನಲ್ಲಿ ಇದ್ದೆ; ಹಾಗಾಗಿ ಕಾಣಲಿಲ್ಲ."